## **ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

## **ಸವಣೂರ**

## **ಅಪರಾಧ ಮೊಕದ್ದಮೆ ಸಂಖ್ಯೆಃ 519/2023**

**ಪಿರ್ಯಾದಿಃ** ಅಬಕಾರಿ ಉಪನಿರೀಕ್ಷಕರು, ಸವಣೂರ ಪಿಎಸ್.

**ವಿರುದ್ಧ**

**ಆರೋಪಿತರುಃ** ರಾಮಣ್ಣ ತಂದೆ ಯಲ್ಲಪ್ಪ ಬಂಡಿ,

ವಯಸ್ಸು : 47 ವರ್ಷ, ಉದ್ಯೋಗ : ಕಿರಾಣಿ ಅಂಗಡಿ ವ್ಯಾಪಾರ,

ಸಾ : ಹೂವಿನಶಿಗ್ಗಿ, ತಾ : ಸವಣೂರ, ಜಿ : ಹಾವೇರಿ.

**ದೋಷಾರೋಪಣೆ**

ನಾನು ಶ್ರೀನಿವಾಸ ಎಸ್.ಎನ್., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳು ಸವಣೂರ, ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಮೇಲ್ಕಾಣಿಸಿದ ಆರೋಪಿತನಾದ ನೀನು ದಿನಾಂಕ : 31.03.2023 ರಂದು ಮುಂಜಾನೆ 8:00 ಗಂಟೆ ಸುಮಾರಿಗೆ ಸವಣೂರ ತಾಲೂಕಿನ ಹೂವಿನಶಿಗ್ಗಿ ಗ್ರಾಮದಲ್ಲಿರುವ ನಿನ್ನ ಕಿರಾಣಿ ಅಂಗಡಿಯಲ್ಲಿ 1) 32 X 180 ಎಂ.ಎಲ್. ಒಲ್ಡ ಟವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು 2) 135 X 90 ಎಂ.ಎಲ್. ಓರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕುಗಳು ಒಟ್ಟು 17.910 ಲೀಟರ ಮದ್ಯವನ್ನು ರಶೀದಿ ರಹದಾರಿ ಪತ್ರಗಳಿಲ್ಲದೆ ಅನಧೀಕೃತವಾಗಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 14 ಮತ್ತು 15 ನ್ನು ಉಲ್ಲಂಘಿಸಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟುಕೊಂಡಿದ್ದು, ಆ ಮೂಲಕ ಅಬಕಾರಿ ಕಾಯ್ದೆ 1965 ಕಲಂ 32(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಎರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಿಮ್ಮ ಫಾಯ್ದೆ ಗೋಸ್ಕರ ಯಾವುದೇ ಪಾಸ್ ಮತ್ತು ಪರ್ಮಿಟ್ ಇಲ್ಲದೇ ಅನಧೀಕೃತವಾಗಿ 1) 32 X 180 ಎಂ.ಎಲ್. ಒಲ್ಡ ಟವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು 2) 135 X 90 ಎಂ.ಎಲ್. ಓರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕುಗಳು ಒಟ್ಟು 17.910 ಲೀಟರ ಮದ್ಯವನ್ನು ಅಕ್ರಮವಾಗಿ ನಿಮ್ಮ ತಾಬಾದಲ್ಲಿ ಮಾರಾಟಕ್ಕಾಗಿ ಇಟ್ಟುಕೊಂಡಿದ್ದು, ಆ ಮೂಲಕ ಅಬಕಾರಿ ಕಾಯ್ದೆ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಮೂರನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಿಮ್ಮ ಪಾಯ್ದೆ ಗೋಸ್ಕರ ಯಾವುದೇ ಪಾಸ್ ಮತ್ತು ಪರ್ಮಿಟ್ ಇಲ್ಲದೇ ಅನಧೀಕೃತವಾಗಿ 1) 32 X 180 ಎಂ.ಎಲ್. ಒಲ್ಡ ಟವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು 2) 135 X 90 ಎಂ.ಎಲ್. ಓರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕುಗಳು ಒಟ್ಟು 17.910 ಲೀಟರ ಮದ್ಯವನ್ನು ಮಾರಾಟ ಮಾಡಲು ನಿಮ್ಮ ಕಿರಾಣಿ ಅಂಗಡಿಯನ್ನು ಉಪಯೋಗಿಸಿದ್ದು, ಆ ಮೂಲಕ ಅಬಕಾರಿ ಕಾಯ್ದೆ ಕಲಂ 38 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ನೀವು ವಿಚಾರಣೆ ಎದುರಿಸತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

(ಶ್ರೀ.ಶ್ರೀನಿವಾಸ ಎಸ್.ಎನ್.)
ಸಿ.ನ್ಯಾ ಮತ್ತು ಪ್ರ.ದ.ನ್ಯಾ.ದಂ.ಗಳು
ಸವಣೂರ.

## ಆರೋಪಿಯ ಉತ್ತರ

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ತಿಳಿಯಿತೇ ?

ಉತ್ತರಃ

ಪ್ರಶ್ನೆ 2) ಈ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ ?

ಉತ್ತರಃ

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

ಸ್ಥಳ : ಸವಣೂರ
ದಿನಾಂಕ : 08-05-2024

ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು.
ಸವಣೂರ.

ಆರೋಪಿತರ ಸಹಿ